

# ವಿಶ್ವದ ಅತಿ ಹಿರಿಯ ತಾಯಿ

**ಈ** ಫೋಟೋ ನೋಡಿ– ಅಜ್ಜಿ ಮತ್ತು ಮೊಮ್ಮಗಳು ಒಟ್ಟಿಗೇ ನಿಂತಿದ್ದಾರೆ ಎಂದುಕೊಂಡಿರಾ? ಹಾಗಿದ್ದರೆ, ನಿಮ್ಮ ಅನಿಸಿಕೆ ತಪ್ಪು. ಇದು ಅಮ್ಮ–ಮಗಳ ಫೋಟೋ!

ಈಕೆ ರೊಮೇನಿಯಾ ದೇಶದವಳು. ಹೆಸರು– ಆಡ್ರಿನಾ. ಸಾಮಾನ್ಯವಾಗಿ ಎಲ್ಲರೂ ವಾನಪ್ರಸ್ಥದ ವಯಸ್ಸು ಎಂದುಕೊಳ್ಳುವ, ನಿವೃತ್ತಿಯಾದ ಆರು ವರ್ಷಗಳ ಬಳಿಕ, ಅಂದರೆ ತನ್ನ 66ನೇ ವಯಸ್ಸಿನಲ್ಲಿ ಆಡ್ರಿನಾ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದ್ದಾಳೆ. ಈ ಹೆಣ್ಣುಮಗು ಎಲಿಜಾಗೆ ಈಗ ಆರು ವರ್ಷ. ಅಂದರೆ ಅಡ್ರಿನಾಗೆ 72!

ಎಡ್ರಿನಾ ಮತ್ತು ಎಲಿಜಾಳ ಭಲೇ ಜೋಡಿಯನ್ನು ನೋಡಿ ನಗುವವರೂ ಇದ್ದಾರೆ; ಮೆಚ್ಚುವವರೂ ಇದ್ದಾರೆ. 'ವಿಶ್ವದ ಅತ್ಯಂತ ಹಿರಿಯ ವಯಸ್ಸಿನ ತಾಯಿ' ಎಂಬ ಪಟ್ಟ ಆಡ್ರಿನಾಗೆ ಲಭಿಸಿದೆ.

**-ವಿದ್ಯಾ ಹಾಲಭಾವಿ**

